ಒ ಎಸ್ 32/2021 ಪಿ.ಡಬ್ಲ್ಯೂ 1

ಇಂದು ದಿಃ 06.08.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಹೆಬ್ಬೆಟ್ಟು ಹಾಕುತ್ತೇನೆ. ನಮ್ಮ ತಂದೆ ತೀರಿ ಹೋಗಿ ಸುಮಾರು 4 ವರ್ಷವಾಗಿದೆ. ನಮ್ಮ ತಂದೆಗೆ ಒಟ್ಟು 3 ಜನ ಮಕ್ಕಳು. ನಮ್ಮ ತಂದೆಗೆ ಒಟ್ಟು 9 ಎಕರೆ ಜಮೀನು ಇದೆ. ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಇರುವ ಮಾಹಿತಿಯನ್ನು ನಾನೇ ಕೊಟ್ಟಿದ್ದೆ. ದಾವಾ ಜಮೀನಿನಲ್ಲಿ ನಾನೆ ಬೆಳೆಯುತ್ತಿಲ್ಲ, ಪ್ರತಿವಾದಿಗಳು ಬೆಳೆಯುತ್ತಿದ್ದಾರೆ. ಜಮೀನಿಗೆ ನೀರು ಬಿಡಲು ಪಂಪ್ ಸೆಟ್ ಕೀ ಕೊಡುತ್ತಿಲ್ಲ ಎಂದು ಅರ್ಜಿ ಸಲ್ಲಿಸಿದ ಜಮೀನಿನಲ್ಲಿ ನಾನು ಈಗ ಟೊಮೋಟೋ ಮತ್ತು ಕಬ್ಬು ಬೆಳೆಯುತ್ತಿದ್ದೇನೆ. 4 ಎಕರೆ ಯಲ್ಲಿ ಕಬ್ಬು ಮತ್ತು 2 ಎಕರೆಯಲ್ಲಿ ಟೊಮೆಟೋ ಹಾಕಿದ್ದೆ. ಅಂದರೆ ಸರ್ವೆ ನಂಬರ್ 269 ರಲ್ಲಿ 4 ಎಕರೆ 4 ಗುಂಟೆ ಪೈಕಿ 2 ಎಕರೆ 2 ಗುಂಟೆಯಲ್ಲಿ ಕಬ್ಬು ಬೆಳೆಯುತ್ತಿದ್ದೇನೆ ಎಂದರೆ ಸರಿ. ಸರ್ವೆ ನಂಬರ್ 255/5 ರಲ್ಲಿ 10 ಗುಂಟೆ ಜಮೀನಿನಲ್ಲಿ ಟೊಮೆಟೋ ಬೆಳೆದಿದ್ದೆ. ನಾನು ಕೃಷಿ ಮಾಡುತ್ತಿರುವ ಜಮೀನು ನನ್ನ ತಂದೆಯ ಆಸ್ತಿಗಳು ಎಂದರೆ ಸರಿ.

ಸುಮಾರು 20 ವರ್ಷಗಳ ಹಿಂದಿನಿಂದಲೂ ದಾವಾ ಜಮೀನಿನಲ್ಲಿ ನಾನೇ ಸ್ವಾಧೀನದಲ್ಲಿ ಇದ್ದೇನೆ ಎಂದರೆ ಸರಿ. ವಕಾಲತ್ ನಲ್ಲಿರುವ ಸಹಿ ನನ್ನದೆ ಆಗಿರತ್ತದೆ. ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಲಾಗಿ ಅದು ಅವರ ಸಹಿ ಎಂದು ಗುರುತಿಸಿದ್ದು, ಖಾಲಿ ಹಾಳೆಗೆ ಸಹಿ ಹಾಕಿರತ್ತೇನೆ ಎನ್ನುತ್ತಾರೆ. ಸದರಿ ಪಾಲುಪಟ್ಟಿಯನ್ನು ನಿಪಿ 1 ಎಂದು ಗುರುತಿಸಲಾಯಿತು.

ಪಾಲುಪಟ್ಟಿಯ ಪ್ರಕಾರ ನಮ್ಮ ಆಸ್ತಿಗಳು ಭಾಗ ಆಗಿಲ್ಲ. ನಿಡಿ.1ರ ಸರ್ವೆ 120/ಪಿ4 ರಲ್ಲಿ ಅಂದರೆ ಐಟಂ 2 ಆಸ್ತಿಯಲ್ಲಿ 1 ಎಕರೆ 2 ಗುಂಟೆ ಜಮೀನು 2ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಐಟಂ 5 ಮತ್ತು 6 ರ ಆಸ್ತಿಯಲ್ಲಿಯೂ ಸಹ 2ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಆದರೆ ಅದನ್ನು ಯಾರಿಗೂ ಸಹ ಬೋಗ್ಯ ಮಾಡಿಲ್ಲ. 4ನೆ ಐಟಂ ಆಸ್ತಿಯಲ್ಲಿ 2ನೇ ಪ್ರತಿವಾದಿ ವಾಸದ ಮನೆ ಮಾಡಿಕೊಂಡಿದ್ದಾರೆ ಎಂದರೆ ಸರಿ. ಪೂರ್ವಕ್ಕೆ ದಾರಿ, ಪಶ್ಚಿಮಕ್ಕೆ 1ನೇ ಪ್ರತಿವಾದಿ ಆಸ್ತಿ, ಉತ್ತರಕ್ಕೆ ದಾರಿ, ದಕ್ಷಿಣಕ್ಕೆ ಪುಟ್ಟಪ್ಪನವರ ಮನೆಯ ಮಧ್ಯದಲ್ಲಿ ಇರುವ ಹಳೆಯ ಮನೆ ನನ್ನ ಭಾಗಕ್ಕೆ ಸೇರಿದ ಸ್ವತ್ತು ಎಂದರೆ ಸರಿ. ಅದೇ ರೀತಿ ನಿಡಿ.1 ರಲ್ಲಿ ರುವ A ಭಾಗದ ಆಸ್ತಿಯು 1ನೆ ಪ್ರತಿವಾದಿಗೆ ಸೇರಿದ ಆಸ್ತಿ ಎಂದರೆ ಗೊತ್ತಿಲ್ಲ.

ದಾವಾ  ಆಸ್ತಿಗಳು ನಿಡಿ.1 ರಂತೆ ವಿಭಾಗವಾಗಿ ನಾವೆಲ್ಲ ಪ್ರತ್ಯೇಕ ಸ್ವಾಧೀನಲ್ಲಿ ಇದ್ದು ಈಗಾಗಲೇ ನನಗೆ ಭಾಗ ಬಂದಿದ್ದರು ಸಹ ದಾವಾ ಆಸ್ತಿಯಲ್ಲಿ ನನಗೆ ಭಾಗ ಬರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು.  ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.